## ಜಾಮೀನು ನೀಡಲು ಹೆಚ್ಚುವರಿ ಸಾಲಿಸಿಟರ್ ಜನರಲ್ ನಟರಾಜ್ ಆಕ್ಷೇಪ

# ಡಿಕೆಶಿಗೆ 14 ದಿನ ನ್ಯಾಯಾಂಗ ಬಂಧನ

ಮೊದಲನೇ ಪುಟದಿಂದ....

ಡಿಕೆಶಿ ಅನಾರೋಗ್ಯದ ಹಿನ್ನೆಲೆಯಲ್ಲಿ ನ್ಯಾಯಾಂಗ ಬಂಧನದಿಂದ ಮುಕ್ತಗೊಳಿಸಬೇಕು. ಇದಕ್ಕೆ ಯಾವ ಷರತ್ತನ್ನು ವಿಧಿಸಿದರೂ ನಾವು ಪಾಲಿಸಲು ಸಿದ್ಧರಿದ್ದೇವೆ. ಇಡಿ ತನಿಖಾ ಪ್ರಕ್ರಿಯೆ ನೋಡಿದರೆ ಇದು ಪೂರ್ವಗ್ರಹ ಹಾಗೂ ದುರುದ್ದೇಶದಿಂದ ಕೂಡಿರುವುದು ಸ್ಪಷ್ಟವಾಗುತ್ತದೆ ಎಂದು ಸಿಂಘ್ವಿ ವಾದಿಸಿದರು.

ಇದಕ್ಕೂ ಮುನ್ನ ಇ.ಡಿ. ಪರ ವಾದಿಸಿದ ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ.ಎಂ. ನಟರಾಜ್, ಈ ಸಂದರ್ಭದಲ್ಲಿ ಶಿವಕುಮಾರ್‌ಗೆ ಜಾಮೀನು ನೀಡುವುದಕ್ಕೆ ನಮ್ಮ ವಿರೋಧವಿದೆ. ಕಳೆದ ಮೂರು ದಿನಗಳಿಂದ ಶಿವಕುಮಾರ್ ರಾಮ್ ಮನೋಹರ್ ಲೋಹಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆಗೆಂದು ದಾಖಲಾಗಿದ್ದು, ಅವರ ವಿಚಾರಣೆ ನಡೆಸಲು ನಮಗೆ ಸಾಧ್ಯವಾಗಿಲ್ಲ. ಹೀಗಾಗಿ, ನ್ಯಾಯಾಂಗ ಬಂಧನಕ್ಕೆ ನೀಡಿದ ಬಳಿಕವೂ ಆರೋಪಿ ವಿಚಾರಣೆ ನಡೆಸಲು ನಮಗೆ ಅವಕಾಶ ನೀಡಬೇಕು ಎಂದು ವಿನಂತಿಸಿಕೊಂಡರು.

ಈಗಾಗಲೇ ನಾವು ಡಿಕೆಶಿಯವರ ಆಡಿಟರ್ ಕರೆಸಿ ವಿಚಾರಣೆ ನಡೆಸಿದ್ದೇವೆ. ಅವರು ನೀಡಿರುವ ಮಾಹಿತಿ ಆಧರಿಸಿ ಶಿವಕುಮಾರ್ ಮುಂದೆ ಪ್ರಶ್ನೆಗಳನ್ನಿರಿಸಿ ಉತ್ತರ ಪಡೆದುಕೊಳ್ಳಬೇಕಿದೆ. ನ್ಯಾಯಾಂಗ ಬಂಧನದ ವೇಳೆಯೂ ಶಿವಕುಮಾರ್ ಆರೋಗ್ಯಕ್ಕೆ ಹಾನಿಯಾಗದಂತೆ ನೋಡಿಕೊಳ್ಳಲಾಗುವುದು. ಆರೋಪಿ ಪರ ವಕೀಲರು ಹಲವು ದಾಖಲೆ ಸಲ್ಲಿಸಿರುವುದರಿಂದ ಅಧ್ಯಯನ ಮಾಡಿ ನಂತರ ವಾದ ಮಂಡಿಸಬೇಕು. ಸಮಯಾವಕಾಶ ಬೇಕಿದ್ದು, ನಾಳೆ ವಾದ ಮಂಡಿಸುತ್ತೇವೆ ಎಂದು ವಿವರಿಸಿದರು.



ವಿಜಯವಾಣಿ ಚಿತ್ರ

ಆಸ್ಪತ್ರೆಯಿಂದ ಇ.ಡಿ. ನ್ಯಾಯಾಲಯಕ್ಕೆ ಮಾಜಿ ಸಚಿವ ಡಿ.ಕೆ. ಶಿವಕುಮಾರ್ ಅವರನ್ನು ಕರೆದುಕೊಂಡು ಬರುತ್ತಿರುವುದು.

### ಡಿ.ಕೆ. ಶಿವಕುಮಾರ್ ಹೇಗಿದ್ದರು?

ಆರ್‌ಎಂಎಲ್. ಆಸ್ಪತ್ರೆಯಿಂದ ನೇರವಾಗಿ ಇ.ಡಿ. ನ್ಯಾಯಾಲಯಕ್ಕೆ ಬಂದಿದ್ದ ಡಿ.ಕೆ. ಶಿವಕುಮಾರ್ ಸುಸ್ತಾಗಿ, ಬಳಲಿದವರಂತೆ ಕಂಡುಬಂದಿದ್ದರು. ಆಸ್ಪತ್ರೆಯಲ್ಲಿದ್ದರಿಂದ ಶೇವಿಂಗ್ ಕೂಡ ಮಾಡಿರಲಿಲ್ಲ. ವಿಚಾರಣೆ ಆರಂಭಗೊಳ್ಳುತ್ತಿದ್ದಂತೆಯೇ ತಮಗೆ ಕುಳಿತುಕೊಳ್ಳಲು ಕುರ್ಚಿ ಬೇಕೆಂದು ಕೇಳಿ ಕುಳಿತಿದ್ದರು. ವಿಚಾರಣೆ ನಂತರ ತಮ್ಮನ್ನು ನೋಡಲು ಬೆಂಬಲಿಗರು ಬಂದಿದ್ದಾರೆ ಎಂಬುದನ್ನು ತಿಳಿದು, ಎದ್ದುನಿಂತು ಅವರೊಂದಿಗೆ ಮಾತನಾಡಿದರು. ಸೋದರ ಡಿ.ಕೆ. ಸುರೇಶ್ ಅವರು, ಬೆಂಬಲಿಗರನ್ನು ಒಬ್ಬೊಬ್ಬರಾಗಿಯೇ ಕೋರ್ಟ್ ಹಾಲ್ ಒಳಗೆ ಕರೆದು ಅಣ್ಣನನ್ನು ನೋಡುವುದಿದ್ದರೆ ನೋಡಿಕೊಂಡು ಬನ್ನಿ ಎಂದು ಪೊಲೀಸರ ವಿರೋಧದ ಮಧ್ಯೆಯೂ ನೆರವಾದರು. ಏತನ್ಮಧ್ಯೆ, ಅಣ್ಣನ ಸ್ಥಿತಿ ನೋಡಿ ಸುರೇಶ್ ಮುಖದಲ್ಲೂ ಬೇಸರ ಎದ್ದುಕಾಣುತ್ತಿತ್ತು.

ಡಿ.ಕೆ. ಶಿವಕುಮಾರ್ ಪುತ್ರಿಯ ಖಾತೆಯೊಂದರಲ್ಲಿ 108 ಕೋಟಿ ರೂ. ಇರುವುದೇ ಹುಬ್ಬೇರಿಸುವಂತಿದೆ. ಇದು ನಂಬಲಸಾಧ್ಯವೆನಿಸಿದರೂ ಕಟು ಸತ್ಯ ಎಂಬುದು ವಾಸ್ತವ. ಈ ಕರಾಳ ಜಾಲವನ್ನು ಬಗೆಯಬೇಕಿದೆ.

| ಕೆ.ಎಂ. ನಟರಾಜ್ ಅಡಿಷನಲ್ ಸಾಲಿಸಿಟರ್ ಜನರಲ್

### ಹೈಪರ್ ಟೆನ್ಷನ್‌ನಿಂದ ಬಳಲಿಕೆ ಉಲ್ಲೇಖ!

ಶಿವಕುಮಾರ್ ಹೈಪರ್ ಟೆನ್ಷನ್ ಸಮಸ್ಯೆಯಿಂದ ಬಳಲುತ್ತಿರುವುದಾಗಿ ವೈದ್ಯರ ವರದಿಯಲ್ಲಿ ದಾಖಲಾಗಿದೆ. ಈ ಅಂಶವನ್ನು ನ್ಯಾಯಾಧೀಶರು ತಮ್ಮ ತೀರ್ಪಿನಲ್ಲೂ ಉಲ್ಲೇಖಿಸಿದ್ದಾರೆ. ಹೈಪರ್ ಟೆನ್ಷನ್‌ನಿಂದಾಗಿ ಅವರ ರಕ್ತದೊತ್ತಡದಲ್ಲಿ ಆಗಾಗ ವ್ಯತ್ಯಾಸ ಕಂಡುಬರುತ್ತಿದೆ. ಇದಕ್ಕೂ ಮುನ್ನ ಡಿ.ಕೆ.ಶಿವಕುಮಾರ್ ಆಂಜಿಯೋಪ್ಲಾಸ್ಟಿಗೆ ಒಳಗಾಗಿದ್ದು, ಅವರಿಗೆ ತೀವ್ರ ಪರಿಣಾಮಕಾರಿ ಔಷಧ ನೀಡಿರುವ ಬಗ್ಗೆ ವೈದ್ಯರ ಡಿಸ್ಚಾರ್ಜ್ ವರದಿಯಲ್ಲಿದೆ ಎಂದು ತೀರ್ಪಿನಲ್ಲಿ ದಾಖಲಿಸಲಾಗಿದೆ.

### ಮುಂದೇನಾಗಬಹುದು

- ಬುಧವಾರ ಡಿಕೆಶಿಗೆ ನಿರ್ಣಾಯಕ ದಿನ
- ಇಡಿ ನ್ಯಾಯಾಲಯದಲ್ಲಿ ಜಾಮೀನು ಸಿಕ್ಕರೆ ಜೈಲಿನಿಂದ ಮುಕ್ತ
- ಸಿಗದಿದ್ದಲ್ಲಿ ತಿಹಾರ್ ಜೈಲಿನಲ್ಲಿ ದಿನ ದೂಡುವುದು ಅನಿವಾರ್ಯ
- ಜೈಲು ಸೇರಿದರೆ ಅಲ್ಲಿಯೇ ಇಡಿ ಅಧಿಕಾರಿಗಳು ಡಿಕೆಶಿ ವಿಚಾರಣೆ ಮಾಡಬಹುದು
- ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿಯಲ್ಲಿ ಸಿಬಿಐ ಅಧಿಕಾರಿಗಳು ತನಿಖೆ ನಡೆಸುವ ಸಾಧ್ಯತೆ